




ಆರ್ಭಟಿಸುತ್ತಾ ದೊಡ್ಡ ಖಡ್ಗವನ್ನು ಹಿಡಿದಿರುವ ವ್ಯಕ್ತಿ ಮತ್ತೊಂದು ಕಡೆಯಿಂದ ಪ್ರತ್ಯಕ್ಷನಾಗುತ್ತಾನೆ. ಇವರಿಬ್ಬರ ಆರ್ಭಟ ಹಾಗೂ ವೇಷಭೂಷಣಗಳನ್ನು ನೋಡಿ ವೀಕ್ಷಕರು ದಂಗಾಗುತ್ತಾರೆ. ಅಷ್ಟರಮಟ್ಟಿಗೆ ನೈಜತೆ.

ಡಂಜನ್ ಕಾರ್ಯ ಚಟುವಟಿಕೆಗಳ ಬಗ್ಗೆ ಕಿರು ಪರಿಚಯ ಹಾಗೂ ಪ್ರದರ್ಶನ ಕಾಲದಲ್ಲಿ ಪ್ರೇಕ್ಷಕರು ಅನುಸರಿಸಬೇಕಾದ ಕ್ರಮಗಳ ಬಗ್ಗೆ ಸಿಬ್ಬಂದಿ ಮಾಹಿತಿ ನೀಡುತ್ತಾರೆ. ಮಗದೊಮ್ಮೆ ದುರ್ಬಲ ಹೃದಯದವರಿಗೆ ಪ್ರವೇಶ ನಿಷೇಧ ಎನ್ನುವುದನ್ನು ಹೇಳಲು ಮರೆಯುವುದಿಲ್ಲ.

ಡಂಜನ್ ಸಿಬ್ಬಂದಿ, ಪ್ರೇಕ್ಷಕರನ್ನು 'ಡಂಜನ್' ಒಳಗೆ ಲಿಫ್ಟ್ ಮೂಲಕ ಕರೆದುಕೊಂಡು ಹೋಗುತ್ತಾರೆ. ಲಿಫ್ಟ್ ಸಂಪೂರ್ಣವಾಗಿ ಕತ್ತಲುಮಯ. ನಾಲ್ಕೈದು ತಳ ಅಂತಸ್ತುಗಳನ್ನು ತಲುಪಿದ ನಂತರ 'ಡಂಜನ್'ನ ನಿಜವಾದ ಪ್ರವೇಶದ್ವಾರ ಸಿಗುತ್ತದೆ. ಅಲ್ಲೊಂದು ವಿಶಾಲವಾದ ಕೋಣೆ, ಮಂದ ಬೆಳಕು, ಎತ್ತ ನೋಡಿದರೂ ನಿಜವಾದ ಶವಗಳಂತೆ ಅಸ್ಪಷ್ಟವಾಗಿ ಗೋಚರಿಸುವ ಶವಗಳ ಪ್ರತಿಕೃತಿಗಳು! ನೋಡಲು ನಿಜವಾದ ಶವಗಳಂತಿದ್ದು ಪ್ರೇಕ್ಷಕರಲ್ಲಿ ಹೆದರಿಕೆ ಮೂಡಿಸುತ್ತವೆ. ನಿರೂಪಕ ಅವುಗಳನ್ನು ಮುಟ್ಟಲು ಅನುಮತಿ ನೀಡುತ್ತಾನೆ. ಅಸಹ್ಯ ಮೂಡಿಸುವಂತಿರುವ ಶವಗಳನ್ನು ಕೆಲವು ಪ್ರೇಕ್ಷಕರು ಅಸಹ್ಯಪಟ್ಟು ಮುಟ್ಟುತ್ತಿರಬೇಕಾದರೆ, ಒಂದು ಮೂಲೆಯಿಂದ ನರಳುತ್ತಿರುವ ಶಬ್ದ ಕೇಳಿ ಬರುತ್ತದೆ. ಕುತೂಹಲದಿಂದ ಅತ್ತ ತಿರುಗಿ ನೋಡಿದರೆ, ಕಣ್ಣುಗುಡ್ಡೆಗಳು ಹೊರಬಂದಿರುವ ಶವ ಪ್ರೇಕ್ಷಕರತ್ತಲೇ ನೋಡುತ್ತಿರುತ್ತದೆ. ಕುತೂಹಲದಿಂದ ಹತ್ತಿರ ಹೋಗಿ ನೋಡುತ್ತಿರಬೇಕಾದರೆ... ಭಯಂಕರವಾದ ಹಿನ್ನೆಲೆ ಧ್ವನಿಯೊಂದಿಗೆ ಶವ ಎದ್ದು ಕುಳಿತುಕೊಳ್ಳುತ್ತದೆ. ಈ ಘಟನೆಯಿಂದ ಹೆದರಿದ ಪ್ರೇಕ್ಷಕರು ಚೀರುತ್ತಾ ಹಿಂದೆ ಓಡುತ್ತಾರೆ. ಪ್ರೇಕ್ಷಕರ ಹೃದಯ ಬಡಿತ ಹೆಚ್ಚಾಗುತ್ತದೆ, ಮೈ ಬೆವರತೊಡಗುತ್ತದೆ. ಆ ಶವ ಒಮ್ಮೆಲೇ ತನ್ನ ಪೋಷಾಕನ್ನು ತೆಗೆದು ಬಿಸಾಡುತ್ತದೆ. ಅಚ್ಚರಿಮೂಡಿಸುವಂತೆ ಓರ್ವ ಸುಂದರವಾದ ತರುಣಿ ಪ್ರತ್ಯಕ್ಷಳಾಗುತ್ತಾಳೆ. ಆಕೆ ಮುಂದೆ ಬಂದು ಪ್ರೇಕ್ಷಕರ ಕೈ ಕುಲುಕಿ ತನ್ನ ಪರಿಚಯವನ್ನು ಮಾಡಿಕೊಳ್ಳುತ್ತಾಳೆ. ಮುಂಬರುವ ಸುಮಾರು ಒಂದೂವರೆ ಗಂಟೆಗಳ ಕಾಲ ನಾನು ನಿಮಗೆ ಡಂಜನ್‌ನಲ್ಲಿ ಜರುಗುವ ಪ್ರದರ್ಶನಗಳಿಗೆ ಮಾರ್ಗದರ್ಶಕಿ ಆಗಿರುತ್ತೇನೆಂದು ಹೇಳಿ ಮುಂದಿನ ಕೋಣೆಗೆ ಹೋಗಲು ತನ್ನನ್ನು ಹಿಂಬಾಲಿಸುವಂತೆ ಹೇಳುತ್ತಾಳೆ. ಮಂದ ಬೆಳಕಿನಲ್ಲಿ ಸಾಗುತ್ತಿರಬೇಕಾದರೆ, ಹೆಣಗಳ ರೋದನ, ಏನನ್ನೋ ಹೇಳಲು ಪ್ರಯತ್ನಿಸುತ್ತಿರುವಂತೆ ಭಾಸವಾಗುತ್ತದೆ. ಭಯದಿಂದಲೇ ಸಾಗುತ್ತಿರಬೇಕಾದರೆ, ಚಿತ್ರಹಿಂಸೆ ಅನುಭವಿಸುತ್ತಿರುವವರ ಚೀರಾಟ ಪೂರ್ಣಗೊಳ್ಳುವುದಕ್ಕೂ ಮುನ್ನ ಕೋಣೆಯಲ್ಲಿರುತ್ತೇವೆ.

## ಡಂಜನ್‌ನ ಆಕರ್ಷಣೆಗಳು

ಟಾರ್ಚರ್ ಚೇಂಬರ್: ಸಂಪೂರ್ಣವಾಗಿ ಕತ್ತಲಾಗಿರುವ ಕೋಣೆಯಲ್ಲಿ ಈ ಪ್ರದರ್ಶನ ನಡೆಯುತ್ತದೆ. ಇಲ್ಲಿ ಚಿತ್ರಹಿಂಸೆಯನ್ನು ಸ್ತ್ರೀ ನೀಡಲಿದ್ದು, ಇದಕ್ಕಾಗಿ ಪುರುಷ ಕೈದಿಗಳನ್ನು ಗೋಡೆಗೆ ಅಭಿಮುಖವಾಗಿ ನಿಲ್ಲಿಸಲಾಗಿರುತ್ತದೆ. ಮಾಸಲು ಬಟ್ಟೆಗಳನ್ನು ಧರಿಸಿರುವ ಕೈದಿಗಳ ಪೇಲವ ಮುಖಗಳು, ಬೆಳೆದಿರುವ ಗಡ್ಡ, ಕೂದಲು ನೋಡಲು ಮರುಕ ಹುಟ್ಟಿಸುವಂತಿರುತ್ತದೆ.

ವೀಕ್ಷಕರಲ್ಲೊಬ್ಬರನ್ನು ಸ್ವಯಂ ಸೇವಕರಾಗಿ ಪ್ರದರ್ಶನದಲ್ಲಿ ಸಹಕರಿಸುವಂತೆ ವಿನಂತಿಕೊಳ್ಳುತ್ತಾರೆ. ಚಿತ್ರಹಿಂಸೆ ನೀಡಲು ಉಪಯೋಗಿಸಲಾಗುವ ಸಾಧನಗಳಿರುವ ಕುರ್ಚಿಯಲ್ಲಿ ಸ್ವಯಂಸೇವಕನನ್ನು ಕುಳ್ಳಿರಿಸಿ ಕಟ್ಟಿಹಾಕಲಾಗುತ್ತದೆ. ನಂತರ ಆತನ ತೊಡೆ ಸಂದಿಯ ಬಳಿ ಕತ್ತರಿಸುವ ಆಯುಧ ಇರಿಸಿ ಇಂಚಿಂಚು ಕತ್ತರಿಸುವಂತೆ ಸ್ಪೆಷಲ್ ಎಫೆಕ್ಟ್ ಮೂಲಕ ತೋರಿಸಲಾಗುತ್ತದೆ. ಚಿತ್ರಹಿಂಸೆಗೆ ಒಳಗಾದವನ ಚೀರಾಟದ ಶಬ್ದ ಹಿನ್ನೆಲೆಯಲ್ಲಿ ಕೇಳಿಬರುತ್ತದೆ. ಶಿಕ್ಷೆ ನೀಡಲು ಉಪಯೋಗಿಸುವ